# ಬೋಧನಾ ಕಲಿಕಾ ಸಾಮಗ್ರಿಗಳು

- 2.1 ಪೀಠಿಕೆ
- 2.2 ಬೋಧನಾಕಲಿಕಾ ಸಾಮಗ್ರಿಗಳು
- 2.3 ಬೋಧನಾ ಕಲಿಕಾ ಸಾಮಗ್ರಿಗಳ ವಿವರಗಳು / ಉಪಯೋಗ
- 2.4 ಬೋಧನಾ ಕಲಿಕಾ ಸಾಮಗ್ರಿಗಳ ಮಹತ್ವ
- 2.5 ಉಪಸಂಹಾರ





**ಡಾ. ಸವಿತಾ**

# ಪೀಠಿಕೆ

- ವಿದ್ಯಾರ್ಥಿ ತನ್ನ ಜ್ಞಾನೇಂದ್ರಿಯಗಳ ಮೂಲಕ ಅನುಭವಿಸಿ ಗಳಿಸುವ ಜ್ಞಾನದಿಂದ ಎಲ್ಲ ಕಲಿಕೆ ನೆರವೇರುವದು . ಅನುಭವವು ದಟ್ಟವಾಗಿದ್ದರೆ ಜ್ಞಾನವು ಚಿರಸ್ಥಾಯಿಯಾಗಬಲ್ಲದು . ಕಲಿಯುವ ಮತ್ತು ಕಲಿಸುವಿಕೆಯ ಪ್ರಕ್ರಿಯೆಯಲ್ಲಿ ಶಿಕ್ಷಕನು ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ಪ್ರೇರೇಪಿಸಿದರೆ ವಿದ್ಯಾರ್ಥಿಗಳಿಂದ ಸೂಕ್ತ ಪ್ರತಿಕ್ರಿಯೆ ದೊರೆತು ಅವರ ಕಲಿಕೆಯ ಅನುಭವವು ಗಾಢಗೊಳ್ಳುತ್ತದೆ

# ಬೋಧನಾ ಕಲಿಕಾ ಸಾಮಗ್ರಿಗಳು

## 1. ಮುದ್ರಿತ ಕಲಿಕಾ ಸಾಮಗ್ರಿಗಳು

1 ) ಪಠ್ಯ ಪುಸ್ತಕಗಳು

2 ) ನಿಘಂಟುಗಳು

3 ) ವಿಶ್ವಕೋಶಗಳು

4 ) ಇತರೆ ಪುಸ್ತಕಗಳು

## 2. ಶ್ರವ್ಯ ಕಲಿಕಾ ಸಾಮಗ್ರಿಗಳು :

1 ) ರೇಡಿಯೋ

2 ) ಧ್ವನಿ ಸುರಳಿ



## 3. ದೃಕ್ ಕಲಿಕಾ ಸಾಮಗ್ರಿಗಳು

1)ಕಪ್ಪು ಹಲಗೆ

2)ಚಿತ್ರಗಳು

3)ಚಮಕಿಸುವ ಕಾರ್ಡುಗಳು

4)ಚಾರ್ಟಗಳು ಮತ್ತು ಚಿತ್ರ ಫಲಕ

5)ಶಿರೋನ್ನತ ಪ್ರಕ್ಷೇಪಕ (

6)ಸ್ಲೈಡಗಳು

7)ಶ್ರವ್ಯ-ದೃಶ್ಯ ಸಾಮಾಗ್ರಿಗಳು

## 4. ಸಮೂಹದ ಮಾಧ್ಯಮಗಳು

1)ದೂರದರ್ಶನ

2)ವಾರ್ತಾ ಪತ್ರಿಕೆ

3)ಚಲನಚಿತ್ರ

## 5. ಚಟುವಟಿಕೆಗಳು

1)ಪ್ರವಾಸ

2)ಸಂದರ್ಶನ

3)ಅಭಿನಯ

## 6. ಭಾಷಾ ಪ್ರಯೋಗಾಲಯ

# ಮುದ್ರಿತ ಕಲಿಕಾ ಸಾಮಗ್ರಿಗಳು:

**1)ಪೀಠಿಕೆ:** ಹಲವಾರು ವಿಷಯಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ,ಕ್ರೋಢಿಕರಿಸಿ,ಜೋಡಿಸಿ ಪುಸ್ತಕ ರೂಪದಲ್ಲಿ ಅಳವಡಿಸಿದ ಮುದ್ರಿತ ವಿಷಯವನ್ನು ಒಳಗೊಂಡ ಕಲಿಕಾ ಸಾಮಗ್ರಿಗಳೇ ಈ ಮುದ್ರಿತ ಕಲಿಕಾ ಸಾಮಗ್ರಿಗಳು ಎಂದು ಕರೆಯಬಹುದು , ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಇವು ಒಳಗೊಂಡಿರುತ್ತದೆ

**2)ಪಠ್ಯಪುಸ್ತಕಗಳು:** ವಿವಿಧ ತರಗತಿಗಳಿಗೆ ಕ್ರಮಬದ್ಧವಾಗಿ ಬೋಧಿಸುವ ಸಲುವಾಗಿ ವ್ಯವಸ್ಥಿತ ರೀತಿಯಲ್ಲಿ ವಿಷಯಗಳನ್ನು ಒಳಗೊಂಡಿರುವ ಪುಸ್ತಕಗಳೇ ಪಠ್ಯಪುಸ್ತಕಗಳು . ಇವು ವಿಷಯ ಸೂಚಿ ಹಾಗೂ ವಿಷಯವನ್ನು ಹೊಂದಿರುತ್ತದೆ . ಪಠ್ಯ ಪುಸ್ತಕಗಳ ಮೂಲಕ ಮಾತ್ರವೇ ಕಲಿಯುವುದು ಅತ್ಯಂತ ಅವೈಜ್ಞಾನಿಕ ಎನ್ನುವ ಅಭಿಪ್ರಾಯವಿದೆಯಾದರೂ ಭಾಷಾ ಬೋಧನೆಗೆ ಪಠ್ಯಪುಸ್ತಕಬೇಕು

**3)ನಿಘಂಟುಗಳು**: ನಿಘಂಟುಗಳು ಭಾಷಾ ಬೋಧನೆಗೆ ಹೆಚ್ಚಿನ ಸಹಾಯ , ವಿವರಣೆ ನೀಡಬಲ್ಲ ಆಧಾರ ಸಂಪನ್ಮೂಲಗಳಾಗಿವೆ . ಬೋಧಕರು , ವಿದ್ಯಾರ್ಥಿಗಳು ತಮ್ಮ ಭಾಷಾ ಕಲಿಕೆಯಲ್ಲಿ ಎದುರಾಗುವ ಕಠಿಣ . ಹೊಸ ಹಾಗೂ ವಿಶಿಷ್ಟ ಪದಗಳಿಗೆ ಇರುವ ಅರ್ಥವನ್ನು ಸರಳವಾಗಿ ನಿರೂಪಿಸುತ್ತದೆ . ಒಂದು ಪದಕ್ಕಿರುವ ವಿವಿದಾರ್ಥಗಳನ್ನು ಸರಳವಾಗಿ ರೂಪಿಸುತ್ತದೆ . ಒಂದು ಪದಕ್ಕೆ ಬೇರೆ ಭಾಷೆಗಳಲ್ಲಿರುವ ಅರ್ಥವನ್ನು ತಿಳಿಸುವುದೇ ನಿಘಂಟುಗಳು , ಆ ಪದವು ನಾಮಪದವೂ , ಕ್ರಿಯಾಪದವೂ , ವಿಶೇಷಣವೂ ಎಂಬುದನ್ನು ಸಹ ಸೂಚಿಸುತ್ತದೆ . ಆಗ ದ್ವಿಭಾಷಾ ನಿಘಂಟುಗಳು ಉದಾ- ಕನ್ನಡ - ಇಂಗ್ಲೀಷ್ ) ತ್ರಿಭಾಷಾ ನಿಘಂಟುಗಳು ( ಉದಾ - ಕನ್ನಡ - ಇಂಗ್ಲೀಷ್ - ಹಿಂದಿ ) ಮುಂತಾಗಿ ಹಲವು ರೀತಿಯ ನಿಘಂಟುಗಳು ರಚಿತವಾಗಿದ್ದು ಬೋಧಕರಿಗೆ ಅಮೂಲ್ಯ ನೆರವನ್ನು ನೀಡುತ್ತದೆ

**4)ವಿಶ್ವಕೋಶಗಳು:** ವಿಶ್ವದ ಅಪೂರ್ವ ಸಂಗತಿಗಳನ್ನು , ಘಟನೆಗಳನ್ನು ಅನುಕ್ರಮವಾಗಿ ಕ್ರೋಢೀಕರಿಸಿ , ಚಿತ್ರ ಹಾಗೂ ವಿವರಣೆಗಳಿಂದ ಕೂಡಿದ ಅತ್ಯಮೂಲ್ಯ ಬೃಹತ್ ಗ್ರಂಥಗಳೇ ವಿಶ್ವಕೋಶಗಳು , ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಪ್ರಪಂಚದಲ್ಲಿ ಜರುಗಿದ ವಿದ್ಯಾಮಾನಗಳು , ವಿಶಿಷ್ಟ ಸಾಧನೆ ಮಾಡಿದ ವ್ಯಕ್ತಿಗಳು , ವಿಚಾರಗಳು , ಸಂಶೋಧನೆಗಳು , ವಿಸ್ಮಯಗಳು , ಅದ್ಭುತಗಳು , ನಿಗೂಢಗಳು , ವಿಶಿಷ್ಟ ವಸ್ತುಗಳು ಸ್ಥಳಗಳು ಮೊದಲಾದವುಗಳನ್ನು ಕುರಿತು ವಿಶ್ವಕೋಶಗಳು ಹೆಚ್ಚಿನ ಮಾಹಿತಿಯನ್ನು ನೀಡುತ್ತವ .

**5 ) ಇತರ ಪುಸ್ತಕಗಳು:** ಪ್ರಾಥಮಿಕ ಹಂತದ ಮಕ್ಕಳ ಕೈಬರಹವನ್ನು ಸುಧಾರಿಸುವಲ್ಲಿ ಅಭ್ಯಾಸ ಪುಸ್ತಕಗಳ ಪಾತ್ರ ಮಹತ್ವದ್ದು , ಅವುಗಳನ್ನು ಆಯಾ ತರಗತಿಗಳ ಮಕ್ಕಳ ಮಟ್ಟಕ್ಕೆ ತಕ್ಕಂತೆ ಸಿದ್ದಗೊಳಿಸಲ್ಪಟ್ಟಿದೆ . ಇದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತದೆ.ಮಕ್ಕಳು ಏನನ್ನು ಬರೆಯಬೇಕು ಏನನ್ನು ಅಭ್ಯಾಸ ಮಾಡಬೇಕೆಂಬುದು ನಿರ್ದೇಶನಗಳನ್ನು ಒಳಗೊಂಡಿದೆ

# ಬೋಧನಾ ಕಲಿಕಾ ಸಾಮಗ್ರಿಗಳ ಸ್ವರೂಪ / ಪಾತ್ರ

ಬೋಧನೆ ಎಂಬುದು ಒಂದು ಸಂಕೀರ್ಣ ಪ್ರಕ್ರಿಯೆ ವಿದ್ಯಾರ್ಥಿಯು ಆಲಿಸಿದ್ದನ್ನು ಜ್ಞಾನೇಂದ್ರಿಯಗಳ ಮೂಲಕ ಅನುಭವಿಸಿ ಕಲಿಕೆಯನ್ನು ಪಡೆಯುತ್ತಾನೆ . ಈ ರೀತಿ ಗಳಿಸಿದ ಅನುಭವವು ಶಾಶ್ವತವಾಗಿ ಸ್ಮರಣೆಯಲ್ಲಿಳಿಯುತ್ತದೆ . ಹಿಂದೆ ಕೇವಲ ಮಾತಿನಿಂದ ಬೋಧನೆ ಶುರುವಾಗುತ್ತಿತ್ತು . ಅಂತಹ ಶಿಕ್ಷಣ ಕೇವಲ ಒಂದೇ ಜ್ಞಾನೇಂದ್ರಿಯವನ್ನಷ್ಟೆ ತಲುಪಿ ಉಳಿದ ಜ್ಞಾನೇಂದ್ರಿಯಗಳನ್ನು ತಟಸ್ಥಗೊಳಿಸುತ್ತಿತ್ತು

ಬೋಧಕನ ವಿಷಯ ಬೋಧನೆಯನ್ನು ಉತ್ತಮಪಡಿಸಿ ವಿದ್ಯಾರ್ಥಿಗಳ ಕಲಿಕೆಗೆ ನೆರವಾಗಿ ಅವರ ಕಲಿಕಾ ಮಟ್ಟವನ್ನು ಹೆಚ್ಚಿಸುವ ಉಪಕರಣ ಗಳನ್ನೇ ಬೋಧನಾ ಕಲಿಕಾ ಸಾಮಗ್ರಿಗಳೆಂದು ಕರೆಯುತ್ತಾರೆ .

**ಈ ಬೋಧನಾ ಉಪಕರಣಗಳನ್ನು / ಕಲಿಕಾ ಸಾಮಗ್ರಿಗಳನ್ನು**

**1 ) ದೃತ್ ಉಪಕರಣಗಳು**
**2 ) ಶ್ರವಣೋಪಕರಣಗಳು**
**3 ) ದೃಕ್ ಶ್ರವಣೋಪಕರಣಗಳು**

ಎಂದು ಮೂರು ವಿಧವಾಗಿ ವಿಂಗಡಿಸುವರು.

# ಬೋಧನಾ ಕಲಿಕಾ ಸಾಮಗ್ರಿಗಳ ಪ್ರಯೋಜನ / ಬಳಕೆ

ಬೋದನಾ ಸಂಪನ್ಮೂಲಗಳು ಇಂದಿನ ಶಿಕ್ಷಣದ ಅವಿಭಾಜ್ಯ ಅಂಗಗಳಾಗಿದ್ದು ಕಲಿಕೆಯನ್ನು ಪರಿಣಾಮಕಾರಿಯಾಗಿಸುತ್ತದೆ . ಇವುಗಳು ವಿದ್ಯಾರ್ಥಿಯ ಕಲಿಕೆಯನ್ನು ಬೋಧನೆಯು ಬೋಧನಾ ಉಪಕರಣಗಳಿಂದ ಕಣ್ಣಿನ ಅನುಭವದ ಮೂಲಕ ಮಗುಎಗೆ ತಲುಪಿ ಮಗುವಿನ ಆಸಕ್ತಿಯನ್ನು ಸೆಳೆಯುತ್ತದೆ ಹಾಗಾಗಿ ಆಸಕ್ತಿ ಹೆಚ್ಚಿ ಕಲಿಕೆಯ ವೇಗ ವೃದ್ಧಿಸುತ್ತದೆ . ಕಲಿಕಾಂಶಗಳು ದೃಢವಾಗಿ ಶಾಶ್ವತವಾಗಿ ನೆನಪಿನಲ್ಲಿ ಉಳಿಯುತ್ತವೆ ಮತ್ತು ಬೋಧಕರ ಬೋಧನೆಯನ್ನು ಪರಿಣಾಮಕಾರಿಯನ್ನಾಗಿಸಿ , ಉಪಾಧ್ಯಾಯರ ಬೋಧನೆಯನ್ನು ಉನ್ನತಿಕರಿಸಿ , ಭಾಷೆಯನ್ನು ಪರಿಣಾಮಕಾರಿಯಾಗಿ ಬೋಧನಾ ಕಲಿಕಾ ಸಾಮಗ್ರಿಗಳು ಕಲಿಸಲು ನೆರವಾಗುತ್ತವೆ . ಇವುಗಳ ಪ್ರಯೋಜನವು ಈ ರೀತಿ ಹೇಳಬಹುದು .

# ಬೋಧನಾ ಸಾಮಗ್ರಿಗಳ ಪ್ರಯೋಜನಗಳು / ಮಹತ್ವ

1 ) ಬೋಧನೆಯನ್ನು ಪರಿಣಾಮಕಾರಿಯಾಗುವಂತೆ ಮಾಡಿ , ಬೋಧಕನ ದೈಹಿಕ ಮತ್ತು ಮಾನಸಿಕ ಶ್ರಮವನ್ನು ಕಡಿಮೆ ಮಾಡುತ್ತದೆ .

2 ) ಕಲಿಕೆಯನ್ನು ಪರಿಣಾಮಕಾರಿಯಾಗುವಂತೆ ಮಾಡಿ , ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯ ಗುಣವನ್ನು ಬೆಳೆಸುತ್ತದೆ .

3 ) ವಿದ್ಯಾರ್ಥಿಗಳ ಅವಧಾನಶಕ್ತಿಅಭಿರುಚಿಯ ಸಾಮರ್ಥ್ಯ ಮತ್ತು ವೈಚಾರಿಕ ಶಕ್ತಿಯನ್ನು ಹೆಚ್ಚಿಸಿ , ಕಲಿಕಾಚಟುವಟಿಕೆಯಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುವಂತೆ ಮಾಡುತ್ತದೆ .


4 ) ವಿದ್ಯಾರ್ಥಿಗಳ ಅನುಭವಗಳನ್ನು ವಿಕಾಸಗೊಳಿಸಿ , ಕುತೂಹಲಗಳನ್ನು ಹೆಚ್ಚಿಸಿ ಕಲಿಕಾ ಚಟುವಟಿಕೆಯಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುವಂತೆ ಮಾಡುತ್ತದೆ .

5 ) ವಿವಿಧ ಬೋಧನಾ ಹಂತಗಳಿಗೆ ನವಚೇತನವನ್ನು ನೀಡಿ ಬೋಧನೆಯನ್ನು ಶಕ್ತಿಯುತವನ್ನಾಗಿಸುತ್ತದೆ .

8 ) . ಕಲಿಕಾ ಪ್ರಕ್ರಿಯೆಯಲ್ಲಿ ಹೆಚ್ಚಿನ ಜ್ಞಾನೇಂದ್ರಿಯಗಳು ಪಾಲ್ಗೊಳ್ಳುವಂತೆ ಮಾಡುತ್ತದ .

9 ) ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ .

10 ) ಕಲಿಕೆಯಲ್ಲಿ ವೈವಿಧ್ಯತೆಯನ್ನು ಉಂಟುಮಾಡಿ ಏಕತೆಯನ್ನು ಕಾಪಾಡಿಕೊಳ್ಳುತ್ತದೆ .



fppt.com

# ದೃಕ್ ಶ್ರವಣೋಪಕರಣಗಳ ಉಪಯುಕ್ತತೆ

ದೃಕ್ ಶ್ರವಣೋಪಕರಣಗಳು ಕಲಿಸುವ ಕಲಿಕೆಯ ಪ್ರಕ್ರಿಯೆಯಲ್ಲಿ ಶೈಕ್ಷಣಿಕವಾಗಿ ಮತ್ತು ಮನೋವೈಜ್ಞಾನಿಕವಾಗಿ ಕಲಿಕೆಯನ್ನು ಉತ್ತೇಜಿಸುತ್ತದೆ .

1) ಕಲಿಕೆಯಲ್ಲಿ ಆಸಕ್ತಿಯನ್ನು ಕೆರಳಿಸುತ್ತವೆ.
2) ಸಮಯ ಹಾಗೂ ಶಕ್ತಿಯ ಮಿತವ್ಯಯ
3) ಬೋಧನೆಯಲ್ಲಿ ಶಾಬ್ದಿಕ ಮಿತವ್ಯಯ
4) ಉತ್ತಮ ಅಭಿಪ್ರೇರಣಾ ಸಾಧನ
5) ತರಗತಿಯಲ್ಲಿ ವೈವಿಧ್ಯಯ ವಾತಾರವಣ
6) ದೃಕ್ ಶ್ರವಣೋಪಕರಣಗಳು ಬೋಧನಾ ಸೂತ್ರಗಳನ್ನು ಆಧರಿಸಿವೆ
7) ಸ್ವಯಂ ಚಟುವಟಿಕೆಗಳಿಗೆ ಅವಕಾಶ
8) ) ವೈಯಕ್ತಿಕ ಅವಶ್ಯಕತೆಗಳನ್ನು ಸಮನ್ವಯ ಮಾಡುವವು
9) ಪಂಚೇಂದ್ರಿಯಗಳಿಗೆ ತರಬೇತಿ
10) ಶಿಕ್ಷಣದಲ್ಲಿರುವ ಕೊರತೆಗಳನ್ನು ನೀಗಿಸುವಲ್ಲಿ ಸಹಾಯ ಮಾಡುವವವು
11) ವೈಜ್ಞಾನಿಕ ಮನೋಭಾವನೆಯನ್ನು ಹೆಚ್ಚಿಸಲು ಸಹಾಯ ಮಾಡುವವು
12) ವಿದ್ಯಾರ್ಥಿಗಳಿಗೆ ಪುನರ್ಬಲವನ್ನು ಒದಗಿಸುವುವು



fppt.com

# ಉಪಸಂಹಾರ :

ಬೋಧನೆ ಮತ್ತು ಕಲಿಕೆ ಪರಿಣಾಮಕಾರಿಯಾಗಲು ತರಗತಿಯಲ್ಲಿ ಅಧ್ಯಾಪಕ ಬಳಸುವ ಉಪಕರಣಗಳೇ / ಸಾಮಗ್ರಿಗಳೇ , ಬೋಧನಾ ಸಂಪನ್ಮೂಲಗಳು , ಇವುಗಳು ಬೋಧನಾ ಕಲಿಕೆಯ ಸಾಮಗ್ರಿಗಳೆಂದೂ , ಕಲಿಕೆಯ ಉಪಕರಣಗಳೆಂದೂ , ಬೋಧನೋಪಕರಣಗಳೆಂದೂ ಬೇರೆ ಬೇರೆ ಹೆಸರುಗಳಲ್ಲಿ ಕರೆಯುತ್ತಾರೆ .

ಅಭ್ಯಾಸ ಪುಸ್ತಕದಿಂದ ವಿದ್ಯಾರ್ಥಿಗಳಲ್ಲಿ ಗಮನರ್ಹಾ ಬದಲಾವಣೆ ಕಂಡು ಬರುತ್ತದೆ.ಇದು ಅಕ್ಷರಗಳ ಶುದ್ಧತೆಗಾಗಿ , ಉತ್ತಮ ಬರವಣಿಗಾಗಿ , ಮಾರ್ಗದರ್ಶನಕ್ಕಾಗಿ ಈ ಅಭ್ಯಾಸ ಪುಸ್ತಕ ಉಪಯುಕ್ತವಾಗಿದೆ . ಅದರಿಂದಲೆ ಶಿಕ್ಷಕರ ಕೈಪಿಡಿಯು ಕಲ್ಪವೃಕ್ಷ . ಕಾಮಧೇನು ಆಗಿ ಶಿಕ್ಷಕರಿಗೆ ದಾರಿದೀಪವಾಗಿದೆ . ಇದರಂತೆ , ಆಧಾರ ಗ್ರಂಥಗಳು . ವಿದ್ಯಾರ್ಥಿಗಳು ತಮ್ಮ ಜೀವನದ ಮುಂದಿನ ಹಂತದಲ್ಲಿ ಬಾರಿ ಉಪಯೋಗ ಪಡೆಯುತ್ತಾರೆ .